56 ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ನಗರ
ಎಸ್.ಸಿ.ಸಂಖ್ಯೆ 1319/2024

ಸಿ.ಡಬ್ಲ್ಯೂ :4 ಪಿ.ಡಬ್ಲ್ಯೂ :3

ಪ್ರಮಾಣ ವಚನ ಭೋದಿಸಲಾಯಿತು.

ದಿಃ 29.01.2026

| | |
|---|---|
| ಹೆಸರು | ಚಂದನ್.ವಿ |
| ತಂದೆಯ ಹೆಸರು | ವೆಂಕಟೇಶ್ .ಆರ್ |
| ವಯಸ್ಸು | 24 ವರ್ಷಗಳು |
| ಕೆಲಸ | ಆಟೋ ಚಾಲಕ |
| ವಾಸ | ಕಾಮಾಕ್ಷಿ ಪಾಳ್ಯ, ಬೆಂಗಳೂರು |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ದಿಃ11.06.2024 ರಂದು ನಾನು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ ಬಳಿ ಹೋಗಿದ್ದೆನು. ನನ್ನ ಜೊತೆಗೆ ಚಾಸಾ 5 ರವರು ಬಂದಿದ್ದರು. ಗಿರೀಶ್ ನಾಯಕ್ ಎಂಬ ಪೊಲೀಸ್ ಅಧಿಕಾರಿಯು ಬಂದು ನಮ್ಮ 4 ಜನರನ್ನು ಕರೆದರು. ಇವರಲ್ಲಿ ನಾನು ಮತ್ತು ಚಾಸಾ 5 ರವರು ಹೋದೆವು. ಒಂದು ಕೊಲೆಯಾಗಿದೆ, ಸಾಕ್ಷಿಯಾಗಿ ಶವಾಗಾರದ ಬಳಿ ಹೋಗಬೇಕಾಗಿದೆ ಎಂದು ತಿಳಿಸಿದರು. ಅದಕ್ಕೆ ನಾವು ಒಪ್ಪಿದೆವು. ನಮಗೆ ನೋಟೀಸ್ ಕೊಟ್ಟಿರುತ್ತಾರೆ. ಅಲ್ಲಿಂದ ನಮ್ಮನ್ನು ವಿಕ್ಟೋರಿಯಾ ಆಸ್ಪತ್ರೆಗೆ ಬರುವಂತೆ ಹೇಳಿದರು. ಪೊಲೀಸರನ್ನು ಹಿಂಬಾಲಿಸಿ ನಾನು ಮತ್ತು ಚಾಸಾ 5 ರವರು ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರಕ್ಕೆ ಹೋದೆವು. ನಾನು, ಚಾಸಾ 5, ಚಾಸಾ 6, ಪೊಲೀಸ್ ಸಿಬ್ಬಂದಿ, ಅಜ್ಜಿ, ತಾತ ಇದ್ದೆವು. ಶವಾಗಾರದ ಒಳಗೆ ಹೋದಾಗ ಶೀತಲ ಪೆಟ್ಟಿಗೆಯಲ್ಲಿಟ್ಟಿದ್ದ ಒಂದು ಶವವನ್ನು ತೆಗೆದರು.

ಆ ಶವವನ್ನು ಅಜ್ಜಿ ತಾತನಿಗೆ ತೋರಿಸಿ ಆ ಶವ ನಿಮ್ಮ ಮಗನದೇ ಎಂದು ಕೇಳಿದರು. ಆ ಅಜ್ಜಿ ತಾತ ಇಬ್ಬರೂ ಆ ಶವ ತಮ್ಮ ಮಗ ರೇಣುಕಾ ಸ್ವಾಮಿಯದ್ದು ಅಂತ ಹೇಳಿದರು. ಶವದ ಮೇಲೆ ಕಪ್ಪು ಮತ್ತು ಗ್ರೇ ಬಣ್ಣದ ಟೀ ಶರ್ಟ್, ನೀಲಿ ಬಣ್ಣದ ಅಂಡರ್ ವೇರ್ ಇತ್ತು. ಆ ಶವಕ್ಕೆ ಹೊಡೆದಿರುವ ಗಾಯಗಳು ಇತ್ತು. ಆ ಶವದ ತಲೆಗೆ, ಕೈಗಳು, ಕಿವಿ, ಬೆನ್ನು, ಎದೆ ಮತ್ತು ಕಾಲುಗಳಿಗೆ ಏಟಾದ ಗಾಯಗಳಾಗಿದ್ದವು. ಆ ಶವವನ್ನು ನಮಗೆ ತೋರಿಸಿ ಅಲ್ಲಿ ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿದರು. ಕೊನೆಯದಾಗಿ ಕರೆ ಮಾಡಿದವರು ಯಾರು ಅಂತ ಅಜ್ಜಿ ತಾತನನ್ನು ಕೇಳಿದಾಗ ಅಲ್ಲಿದ್ದ ತಾತ ತನ್ನ ಹೆಂಡತಿಯಾದ ಅಜ್ಜಿ ಕರೆ ಮಾಡಿದ್ದರು ಅಂತ ಹೇಳಿದರು. ಅಜ್ಜಿ ತನ್ನ ಮಗನಿಗೆ ಕರೆ ಮಾಡಿದಾಗ ಆತ ತನ್ನ ಸ್ನೇಹಿತರ ಜೊತೆಗೆ ಹೋಗುತ್ತಿದ್ದೇನೆ ಅಂತ ಹೇಳಿದ್ದನು ಅಂತ ಹೇಳಿದರು. ಟೈಪ್ ಮಾಡಿದ ನಂತರ ನಮ್ಮಿಂದ ರುಜು ಪಡೆದುಕೊಂಡರು. ನಂತರ ಶವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿಕೊಟ್ಟರು. ನಿಡಿ.9 ರಲ್ಲಿರುವ ತಮ್ಮ ರುಜುವನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ( ಸಾಕ್ಷಿದಾರರಿಗೆ ಕೊಟ್ಟ ನೋಟೀಸ್ ಪ್ರತಿ ಜೆರಾಕ್ಸ್ ಆಗಿರುವುದರಿಂದ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.)

ದಿಃ21.06.2024 ರಂದು ನಾನು ಆಟೋದಲ್ಲಿ ಸತ್ವ ಅಪಾರ್ಟ್ ಮೆಂಟ್ ಬಳಿ ಇದ್ದೆನು. ಸುಬ್ರಹ್ಮಣಿ ಎಂಬ ಇನ್ಸ್ ಪೆಕ್ಟರ್ ಇವರು ನನ್ನ ಬಳಿ ಬಂದರು. ಒಂದು ಸಿಸಿಟಿವಿ ಫ್ಯೂಟೇಜ್ ನೋಡಬೇಕಾಗಿದೆ ಸಾಕ್ಷಿಯಾಗಿ ಬರುತ್ತೀರಾ ಎಂದು ಕೇಳಿದರು. ನಾನು ಮತ್ತು ಚಂದ್ರಕುಮಾರ್ ಪಂಚರಾಗಿ ಹೋಗಲು ಒಪ್ಪಿದೆವು. ಆಗ ನಮಗೆ ನೋಟೀಸ್ ಕೊಟ್ಟಿರುತ್ತಾರೆ. ಅದನ್ನು ರುಜು ಮಾಡಿ ಕೊಟ್ಟಿರುತ್ತೇವೆ. ಆ ನೋಟೀಸನ್ನು ಈಗ ನೋಡುತ್ತಿದ್ದು ನಿಪಿ.14 ಎಂದು, ಅದರಲ್ಲಿರುವ ಸಾಕ್ಷಿಯ ರುಜುವನ್ನು ನಿಪಿ.14(ಎ) ಎಂದು ಗುರುತಿಸಲಾಯಿತು. ನಂತರ ನಾವು ಸತ್ವ ಅಪಾರ್ಟ್ ಮೆಂಟ್ ಬೇಸ್‌ಮೆಂಟ್‌ಗೆ ಹೋದೆವು.

ಸುಬ್ರಹ್ಮಣಿ ಇನ್ಸ್ ಪೆಕ್ಟರ್ ಇವರು ದಯಾನಂದ್ ಎಂಬ ಸಿಸಿಟಿವಿ ಮ್ಯಾನೇಜ್ ಮಾಡುವವನನ್ನು ಬೇಟಿಯಾದರು. ಕೊಲೆ ಕೇಸಿನ ಸಿಸಿಟಿವಿ ಫ್ಯೂಟೇಜ್ ಬೇಕಾಗಿದೆ ಎಂದು ಹೇಳಿದರು. ಅದಕ್ಕೆ ದಯಾನಂದ್ ಯಾವ ದಿನಾಂಕದಂದು ಎಂದು ಕೇಳಿದರು. ಅದಕ್ಕೆ ಸುಬ್ರಹ್ಮಣಿ ಇನ್ಸ್ ಪೆಕ್ಟರ್ ಇವರು ದಿಃ08.06.2024 ಹಾಗೂ ದಿಃ09.06.2024 ರ ಎರಡು ದಿನದ ಸಿಸಿಟಿವಿ ಫ್ಯೂಟೇಜ್ ತೋರಿಸುವಂತೆ ಹೇಳಿದರು. ದಿಃ08.06.2024 ರ ಸುಮಾರು ರಾತ್ರಿ 10.25 ರ ಸಿಸಿಟಿವಿ ಫ್ಯೂಟೇಜ್ ನೋಡಿದಾಗ ಆ ಸಮಯಕ್ಕೆ ಒಂದು ಕೆಂಪು ಬಣ್ಣದ ಜೀಪ್ ಬಂದು, ಅದು ಎಡಗಡೆಗೆ ತಿರುಗುವುದು ಕಾಣುತ್ತದೆ. ಆ ಜೀಪ್ ಸುಮ್ಮನಹಳ್ಳಿಯ ಸರ್ವೀಸ್ ರಸ್ತೆಯಿಂದ ಬಂದು ಎಡಕ್ಕೆ ತಿರುಗಿರುತ್ತದೆ. ಸುಮಾರು 5-10 ನಿಮಿಷಗಳ ನಂತರ ಆ ಜೀಪ್ ಮತ್ತೆ ವಾಪಸ್ಸು ಬರುತ್ತದೆ.

ದಿಃ09.06.2024 ರ ರಾತ್ರಿ 1.30 ಗಂಟೆಗೆ ಒಂದು ಬಿಳಿ ಬಣ್ಣದ ಸ್ಕಾರ್ಪಿಯೋ ಬರುತ್ತದೆ. ಅದೂ ಸಹ ಸುಮ್ಮನಹಳ್ಳಿಯ ಸರ್ವೀಸ್ ರಸ್ತೆಯಿಂದ ಬಂದು ಎಡಕ್ಕೆ ತಿರುಗಿರುತ್ತದೆ. ಸುಮಾರು 5-10 ನಿಮಿಷಗಳ ನಂತರ ಆ ವಾಹನ ಮತ್ತೆ ವಾಪಸ್ಸು ಬರುತ್ತದೆ. ಅದರ ಡಿಕ್ಕಿ ಓಪನ್ ಇರುತ್ತದೆ. ಅದಾದ 2-3 ನಿಮಿಷಗಳ ನಂತರ ಮೂರು ಜನ ನಡೆದುಕೊಂಡು ಬರುತ್ತಾರೆ. ಈ ಎಲ್ಲಾ ಘಟನೆಯ ಚಿತ್ರಾವಳಿಯನ್ನು ನಮಗೆ ತೋರಿಸುತ್ತಾರೆ. ಸುಬ್ರಹ್ಮಣಿ ಇನ್ಸ್ ಪೆಕ್ಟರ್ ಇವರು ನಾನು ಮೇಲೆ ಹೇಳಿದ ದೃಶ್ಯಾವಳಿಯನ್ನು ಹೊಸ ಪೆನ್ ಡ್ರೈವ್ ನಲ್ಲಿ ಕಾಪಿ ಮಾಡಿ ಕೊಡುವಂತೆ ದಯಾನಂದ್‌ಗೆ ಹೇಳಿದರು. ಅದರಂತೆ ದಯಾನಂದ್ ಇವರು ಆ ಪೆನ್ ಡ್ರೈವ್ ಗೆ ಕಾಪಿ ಮಾಡಿ ಕೊಟ್ಟರು. ಅದನ್ನು ಒಂದು ಕಾಪಿ ಬಣ್ಣದ ಕವರ್ ನಲ್ಲಿ ಹಾಕಿದರು. ಅದಕ್ಕೆ "ಕೆ" ಎಂಬ ಅಕ್ಷರದಿಂದ ಮೊಹರು ಮಾಡಿದರು. ಅದಕ್ಕೆ ಒಂದು ಸ್ಲಿಪ್ ಅಂಟಿಸಿದ್ದು, ಅದಕ್ಕೆ ನಾನು, ಚಂದ್ರಕುಮಾರ್ ಮತ್ತು ಸುಬ್ರಹ್ಮಣ್ಯ ಇನ್ಸ್ ಪೆಕ್ಟರ್ ಇವರು ರುಜು ಮಾಡಿರುತ್ತೇವೆ. (ಆ ಪೌಚನ್ನು ಸಾಕ್ಷಿದಾರರು ಗುರುತಿಸಿದ್ದು ಆ ಪೌಚ್

ಮೇಲಿರುವ ಸೀಲನ್ನು ಆರೋಪಿ ಪರ ವಕೀಲರಿಗೆ ತೋರಿಸಿದ್ದು ಅವರು ಆ ಸೀಲನ್ನು ಪರಿಶೀಲಿಸಿ ಅದು ಸುಸ್ಥಿತಿಯಲ್ಲಿರುತ್ತದೆ ಅಂತ ದೃಡೀಕರಿಸಿರುತ್ತಾರೆ).

ಪೌಚನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಿದಾಗ ಅದರಲ್ಲಿ ಒಂದು ಪೆನ್ ಡ್ರೈವ್ ಇದ್ದು, ಅದನ್ನು ಸಾಕ್ಷಿದಾರರು ಗುರುತಿಸಿರುತ್ತಾರೆ. ಅದನ್ನು ಮು.ಮಾ 9 ಎಂದು ಗುರುತಿಸಲಾಯಿತು. ಆ ಪೌಚ್ ಮೇಲಿರುವ ಸಾಕ್ಷಿಯ ರುಜುವನ್ನು ನಿಪಿ.9(ಎ) ಎಂದು ಗುರುತಿಸಲಾಯಿತು.

ಸತ್ವ ಅಪಾರ್ಟ್ ಮೆಂಟ್ ಗೇಟ್ ಬಳಿ ಬಂದು, ಅಲ್ಲಿಂದ ಎಷ್ಟು ದೂರದಲ್ಲಿ ಶವ ಬಿದ್ದಿತ್ತು ಅಂತ ನೋಡಿದರು, ಆ ಶವ ಸುಮಾರು 90 ಮೀಟರ್ ಅಂತರದಲ್ಲಿ ಬಿದ್ದಿರುವ ಸ್ಥಳ ಆಗಿತ್ತು. ಆ ಸಮಯದಲ್ಲಿ ಚೆಕ್‌ಬಂಧಿ ಬರೆದುಕೊಂಡರು. ನಾವು ತೋರಿಸಿದ್ದೆಲ್ಲವನ್ನು ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು ಮಾಡಿಕೊಂಡರು. ಲ್ಯಾಪ್ ಟಾಪ್ ನಿಂದ ಪ್ರಿಂಟ್ ತೆಗೆದುಕೊಂಡು ನನ್ನ ರುಜು ಪಡೆದುಕೊಂಡರು. ಅದನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ನೋಡುತ್ತಿದ್ದು ಅದು ಸ್ಥಳ ಮಹಜರ್ ಆಗಿದ್ದು ಅದನ್ನು ನಿಪಿ.15 ಎಂದು, ಅದರಲ್ಲಿರುವ ಸಾಕ್ಷಿಯ ರುಜುವನ್ನು ನಿಪಿ.15(ಎ) ಎಂದು ಗುರುತಿಸಲಾಯಿತು. ನನ್ನಿಂದ ಮುಚ್ಚಳಿಕೆ ಬರೆಸಿಕೊಂಡರು. ಅದನ್ನು ಈಗ ನೋಡುತ್ತಿದ್ದು ನಿಪಿ.16 ಎಂದು, ಅದರಲ್ಲಿರುವ ಸಾಕ್ಷಿಯ ರುಜುವನ್ನು ನಿಪಿ.16(ಎ) ಎಂದು ಗುರುತಿಸಲಾಯಿತು. ಶವ ಬಿದ್ದ ಸ್ಥಳದಲ್ಲಿ ಫೋಟೋ ತೆಗೆದರು. ಅದೇ ರೀತಿಯಾಗಿ ಸಿಸಿಟಿವಿ ಫ್ಯೂಟೇಜ್ ಇರುವ ಸ್ಥಳದಲ್ಲಿ ಫೋಟೋ ತೆಗೆದಿರುತ್ತಾರೆ. 4 ಫೋಟೋಗಳ ಒಂದು ದಾಖಲಾತಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ.17 ಎಂದು, ಸಾಕ್ಷಿದಾರರ ಭಾವಚಿತ್ರವನ್ನು ನಿಪಿ.17(ಎ) ಯಿಂದ ನಿಪಿ.17(ಡಿ ) ಎಂದು ಗುರುತಿಸಲಾಯಿತು. ಶವಾಗಾರದಲ್ಲಿಯೂ ಒಂದು ಫೋಟೋ ತೆಗೆದಿರುತ್ತಾರೆ. ಆ

ಫೋಟೋಗಳನ್ನು ಸಾಕ್ಷಿದಾರರು ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.6 ರಿಂದ 9 ಎಂದು ಗುರುತಿಸಲಾಗಿದೆ. ನಿಪಿ.6 ರಿಂದ 9 ರಲ್ಲಿ ಕಂಡ ಶವವನ್ನು ಸಾಕ್ಷಿದಾರರು ರೇಣುಕಾ ಸ್ವಾಮಿಯ ಶವ ಎಂದು ಗುರುತಿಸಿರುತ್ತಾರೆ. ನಿಪಿ.6 ಮತ್ತು 8 ರಲ್ಲಿರುವ ಸಾಕ್ಷಿಯ ಭಾವಚಿತ್ರವನ್ನು ನಿಪಿ.6(ಎ) ಮತ್ತು ನಿಪಿ.8(ಎ) ಎಂದು ಗುರುತಿಸಲಾಯಿತು.

ಶವದ ಮೇಲಿದ್ದ ಬಟ್ಟೆಗಳನ್ನು ನೋಡಿದರೇ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಟೀ ಶರ್ಟ್ ಮತ್ತು ಅಂಡರ್ ವೇರನ್ನು ಸಾಕ್ಷಿದಾರರು ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ 1 ಮತ್ತು 2 ಎಂದು ಗುರುತಿಸಲಾಗಿದೆ.

ಈ ಹಂತದಲ್ಲಿ ಮುಖ್ಯ ವಿಚಾರಣೆಗಾಗಿ ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇ.

(ಐ.ಪಿ.ನಾಯಿಕ)
56 ನೇ ಅಪರ ಸಿಟಿ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು.